ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಕೇಂದ್ರ ಸರ್ಕಾರದವರಿಂದ ಸೀಮೆಎಣ್ಣೆಯ ಸರಬರಾಜು

೧೯೭೦ ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಆಹಾರ ಹಾಗೂ ಪಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕೇಂದ್ರ ಸರ್ಕಾರದವರಿಂದ ಪ್ರತಿ ತಿಂಗಳು ರಾಜ್ಯ ಸರ್ಕಾರಕ್ಕೆ ನೀಡುತ್ತಿರುವ ಸೀಮೆಎಣ್ಣೆಯ ಪ್ರಮಾಣ ಎಷ್ಟು ?

(ಆ) ರಾಜ್ಯದಲ್ಲಿ ಸೀಮೆಎಣ್ಣೆ ಅಭಾವದಿಂದ ಜನರು ತತ್ತರಿಸಲು ಕಾರಣವೇನು ?

(ಇ) ರಾಜ್ಯದಲ್ಲಿ ಸೀಮೆಎಣ್ಣೆಯನ್ನು ಸರಿಯಾದ ರೀತಿಯಲ್ಲಿ ವಿತರಣೆ ಇಲ್ಲದೆ ಕಾಳಸಂತೆಕೋರರು ಕಳ್ಳದಾಸ್ತಾನು ಮಾಡಿ ಮಾರಾಟ ಮಾಡುವುದರಿಂದ ಜನತೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಈ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

(ಅ) ಮಾಹೆಯಾನ ಸರಾಸರಿ ೩೬,೦೦೦ ಕಿಲೋ ಲೀಟರ್‌ಗಳು.

(ಆ) ರಾಜ್ಯಕ್ಕೆ ಒದಗಿಸುತ್ತಿರುವ ಸೀಮೆಎಣ್ಣೆಯ ಪ್ರಮಾಣವು ನಮ್ಮ ಬೇಡಿಕೆಗಿಂತ ಕಡಿಮೆ ಇರುವುದರಿಂದ ಕೆಲವು ವೇಳೆ ಸಾಗಾಣಿಕೆ ತೊಂದರೆಗಳಿಂದ ಕೆಲವು ಸಂದರ್ಭಗಳಲ್ಲಿ ಅಲ್ಪಸ್ವಲ್ಪ ಅಭಾವದ ದೂರುಗಳು ಬಂದಿರುತ್ತವೆ.

(ಇ) ರಾಜ್ಯಕ್ಕೆ ಬಿಡುಗಡೆಯಾದ ಸೀಮೆಎಣ್ಣೆಯನ್ನು ಸಮರ್ಪಕವಾದ ರೀತಿಯಲ್ಲಿ ವಿತರಣೆ ಮಾಡಲು ಎಲ್ಲಾ ಏರ್ಪಾಡುಗಳನ್ನೂ ಮಾಡಲಾಗಿದೆ. ಆದಾಗ್ಯೂ ಕೆಲವು ಕಡೆಗಳಲ್ಲಿ ಸೀಮೆಎಣ್ಣೆಯ ಮಾರಾಟಗಾರರು ಅಕ್ರಮ ವ್ಯವಹಾರಗಳಲ್ಲಿ ತೊಡಗಿದ್ದು, ಸರ್ಕಾರದ ಗಮನಕ್ಕೆ ಬಂದಿವೆ. ಅಂತಹ ಸಂದರ್ಭಗಳಲ್ಲಿ ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

(ಈ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಿಬ್ಬಂದಿ ಹಾಗೂ ಆಹಾರ ಘಟಕ (ಫುಡ್ ಸೆಲ್)ನ ಅಧಿಕಾರಿಗಳು ಸಗಟು ಮತ್ತು ಚಿಲ್ಲರೆ ವ್ಯಾಪಾರಿಗಳ ಮೇಲೆ ಸದಾ ನಿಗಾ ಇಟ್ಟು ಸಕಾಲದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಆದೇಶ ನೀಡಲಾಗಿದೆ.

ರಾಜ್ಯದಲ್ಲಿನ ಖಾಸಗಿ ಹಾಗೂ ಸರ್ಕಾರಿ ಶುಶ್ರೂಷಕ ಮಹಾ ವಿದ್ಯಾಲಯಗಳು

೧೯೯೩ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ)—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇನ್ನು ಮುಂದೆ ಕರ್ನಾಟಕ ಲೋಕಸೇವಾ ಆಯೋಗದಿಂದ ವೈದ್ಯರ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಭಾರತೀಯ ವೈದ್ಯ ಪದ್ಧತಿಯ ಆಯುರ್ವೇದ ಪದವೀಧರರನ್ನು ವೈದ್ಯರಾಗಿ ಪ್ರಮಾಣ ೨:೧ ರಂತೆ ನೇಮಕಾತಿ ಮಾಡಬೇಕೆಂದು ಕರ್ನಾಟಕ ಸರ್ಕಾರಕ್ಕೆ ಕೇಂದ್ರ ಸರಕಾರದಿಂದ ನಿರ್ದೇಶನವೇ ನ ದರೂ ಬಂದಿದೆಯೇ?

ಆ) ಹಾಗಿದ್ದರೆ ಇಲ್ಲಿಯವರೆವಿಗೆ ಈ ರೀತಿ ನೇಮಕವಾದ ವೈದ್ಯರುಗಳ ಸಂಖ್ಯೆ?

ಇ) ಹಾಗಿದ್ದಿದ್ದಲ್ಲಿ ಮೇಲ್ಕಂಡ ಪ್ರಮಾಣದಲ್ಲಿ ಆಯುರ್ವೇದ ವೈದ್ಯರನ್ನು ರಾಜ್ಯದಲ್ಲಿರುವ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ನೇಮಕ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?